ದಿನಾಂಕಃ 28.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

4. ಪ್ರತಿವಾದಿಯ ತಂದೆ, ತಾಯಿ ಮತ್ತು ಸಹೋದರರನ್ನು ನಾನು ಬೇಟಿ ಮಾಡಿದ್ದೇನೆ. ತಾರೀಖು ಹೇಳಲಾಗುವುದಿಲ್ಲ. ಅವರೆಲ್ಲ ಒಟ್ಟಾಗಿ ವಾಸವಿದ್ದಾರೆಂದರೆ ಸರಿ. ಅವರನ್ನು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿ ಒಬ್ಬರು ನನ್ನ ಕಡೆ ಬಂದರು ನನಗೆ ಹೊಲ ಕೊಡುತ್ತೇನೆ ಎಂದರು ನಾನು ಹಣ ಕೊಟ್ಟೆ ಎನ್ನುತ್ತಾರೆ. ಹೊಲ ಮಾರುತ್ತೇನೆಂದು ಗೋಕಾಕ್‌ನ ರವಿವಾರ್‌ಪೇಟೆಯಲ್ಲಿರುವ ನನ್ನ ಅಂಗಡಿಯ ಬಳಿ ಬಂದಿದ್ದರು. ತಾರೀಖು ನನಗೆ ಗೊತ್ತಿಲ್ಲ. ಹಣವನ್ನು ಚೆಕ್ ಮೂಲಕ ಅಥವಾ ಆರ್ ಟಿ ಜಿ ಎಸ್ ಮೂಲಕ ಕೊಡಲು ನನಗೇನೂ ತೊಂದರೆ ಇರಲಿಲ್ಲ, ಅವರು ನಗದು ಹಣ ಬೇಕೆಂದು ಕೇಳಿದರು ನಾನು ಕೊಟ್ಟೆ, ನಾನು ಕೊಟ್ಟ ಹಣದ ನೋಟುಗಳ ಮುಖಬೆಲೆ ರೂ.500 ಹಾಗೂ ರೂ.2000 ಆಗಿತ್ತು. ಸದರಿ ಹಣವನ್ನು ನನ್ನ ಖಾತೆಯಿಂದ ತೆಗೆದು ಕೊಟ್ಟಿದ್ದೇನೆ. ಈ ರೀತಿ ಹಣ ನನ್ನ ಖಾತೆಯಿಂದ ತೆಗೆದುಕೊಂಡ ಬಗ್ಗೆ ತೋರಿಸುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಪ್ರತಿವಾದಿಯ ಜೊತೆ ಮಲ್ಲಪ್ಪ ಮಾಯನ್ನವರ್‌ರವರು ಹಣ ಪಡೆದುಕೊಳ್ಳಲು ಬಂದಿದ್ದರು. ಹಣ ಎಣಿಸಿಲು ಅರ್ಧ ಗಂಟೆ ಸಮಯ ತೆಗೆದುಕೊಂಡಿತು. ಹಣ ಅವರಿಗೆ ನೀಡಿದ ಬಗ್ಗೆ ನಾನು ಯಾವುದೇ ಪಾವತಿ ರಸೀದಿಯನ್ನು ಅವರಿಂದ ಬರೆಸಿಕೊಂಡಿಲ್ಲ. ಈ ರೀತಿ ಅವರಿಂದ ಪಾವತಿ ಬರೆಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ನಾನು ಪ್ರತಿವಾದಿಗೆ 10 ಲಕ್ಷ ನಗದು ಹಣವನ್ನು ಕೊಟ್ಟಿದ್ದೇನೆ ಅಗ ಅವರ ಜೊತೆ ಮಾಯನ್ನವರ್‌ರವರು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರಕ್ಕೂ ಮೊದಲು ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಕೊಟ್ಟು ತೆಗೆದುಕೊಳ್ಳುವ ವ್ಯವಹಾರ ಆಗಿಲ್ಲ.

5. ಸಬ್‌ರಿಜೀಸ್ಟ್ರಾರ್ ಕಛೇರಿಯಲ್ಲಿ ಸಾಕ್ಷಿದಾರರಿಗೆ ಕರಾರುಪತ್ರದಲ್ಲಿರುವ ಅಂಶಗಳನ್ನು ಓದಿ ಹೇಳಿದ್ದಾರೆ. ಸಬ್‌ರಿಜೀಸ್ಟ್ರಾರ್ ಕಛೇರಿಯಲ್ಲಿ ಕರಾರುಪತ್ರವನ್ನು ಬರೆದವರು ಓದಿ ಹೇಳಿರುತ್ತಾರೆ. ಅಲ್ಲಿ 4 ಜನ ಸಾಕ್ಷಿಗಳು, ನಾನು ಮತ್ತು ಕೊಡುವವರು ಇದ್ದರು. ಸಾಮಾನ್ಯವಾಗಿ ಒಂದು ಖರೀದಿ ಕರಾರುಪತ್ರ ಅಥವಾ ಖರೀದಿಪತ್ರವನ್ನು ಮಾಡುವ ಮೊದಲು 2 ಪಾರ್ಟಿಗಳ ನಡುವೆ ಮಾತುಕತೆ ಆಗುತ್ತದೆ ಎಂದರೆ ಸರಿ. ನಾನು ಹೇಳುವ ರೀತಿ ಯಾವತ್ತೂ ಸಹ ಪ್ರತಿವಾದಿ ಹಾಗೂ ನನ್ನ ನಡುವೆ ಖರೀದಿ ಕರಾರಿನ ವ್ಯವಹಾರ ಆಗಿಲ್ಲ, ಮಾತುಕತೆ ಆಗಿಲ್ಲ, ನಾನು ಅವರಿಗೆ ಹಣ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವರ್ಷ ಆದಾಯ ತೆರಿಗೆ ರಿಟರ್ನ್ಸ್‌ನ್ನು ಸಲ್ಲಿಸುತ್ತೇನೆಂದರೆ ಸರಿ. ಸದರಿ ರಿಟರ್ನ್ಸ್ ಸಲ್ಲಿಸುವಾಗ ನಾನು ಪ್ರತಿವಾದಿಗೆ ಕೊಟ್ಟಿದ್ದನೆಂದು ಹೇಳುವ ಹಣದ ಬಗ್ಗೆ ತೋರಿಸಿಲ್ಲ. ಈ ರೀತಿ ತೋರಿಸಲು ನನಗೇನೂ ತೊಂದರೆ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಯ ಮುಗ್ದತೆಯನ್ನು ದುರಪಯೋಗ ಪಡಿಸಿಕೊಂಡು ನನ್ನ ತಂದೆಯ ಖರೀದಿ ಕರಾರನ್ನು ರದ್ದು ಪಡಿಸುತ್ತೇವೆಂದು ಕರೆಸಿ ನಾನು ಈ ದಾವೆಯ ಕರಾರುಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು, ಸಾಕ್ಷಿಗಳು ಮತ್ತು ಪತ್ರಬರಹಗಾರರು ಶಾಮೀಲಾಗಿ ಈ ಕರಾರುಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ